ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH
ಪತ್ರಿಕಾ ತುಣುಕುಗಳು
PAPER CLIPPINGS
ಇಲಾಖೆ / ವಿಷಯ : DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER: ಪ್ರಜಾವಾಣಿ
ದಿನಾಂಕ : DATE : 21/01/2020

ಮಂಗಳೂರು: ಜನನಿಬಿಡ ಸ್ಥಳದಲ್ಲೇ ಸ್ಫೋಟಕ್ಕೆ ವಿಫಲ ಯತ್ನ ನಡೆಸಿದ ದುಷ್ಕರ್ಮಿಗಳು

# ವಿಮಾನ ನಿಲ್ದಾಣದಲ್ಲಿ ಬಾಂಬ್

ಪ್ರಜಾವಾಣಿ ವಾರ್ತೆ

**ಮಂಗಳೂರು:** ಇಲ್ಲಿನ ಬಜ್ಪೆಯ ಮಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಪ್ರವೇಶ ದ್ವಾರದಲ್ಲೇ ಸೋಮವಾರ ಬೆಳಿಗ್ಗೆ ಪತ್ತೆಯಾದ 'ಬಾಕ್ಸ್ ಬಾಂಬ್', ತೀವ್ರ ಆತಂಕ ಸೃಷ್ಟಿಸಿತ್ತು. ಇಡೀ ದಿನ ಕಾರ್ಯಾಚರಣೆ ನಡೆಸಿ ಬಾಂಬ್ ಇದ್ದ ಬ್ಯಾಗ್ ಅನ್ನೇ ಹೊರಕ್ಕೆ ಸಾಗಿಸಿ, ಸ್ಫೋಟಿಸಿ ನಾಶಪಡಿಸಲಾಯಿತು.

ವಿಮಾನ ನಿಲ್ದಾಣದ ಪ್ರವೇಶ ದ್ವಾರದ ಬಳಿಯ ಟಿಕೆಟ್ ಕೌಂಟರ್ ಸಮೀಪದಲ್ಲಿದ್ದ ಕುರ್ಚಿಯ ಮೇಲೆ ಬ್ಯಾಗ್ ಒಂದರಲ್ಲಿ ಇರಿಸಿದ್ದ ಭಾರಿ ಪ್ರಮಾಣದ ಸ್ಫೋಟಕವುಳ್ಳ ಬಾಂಬ್ ಬೆಳಿಗ್ಗೆ 9 ಗಂಟೆಗೆ ಪತ್ತೆಯಾಯಿತು. ಅದರ ಬೆನ್ನಲ್ಲೇ ಬಂದ ವಿಮಾನ ಸ್ಫೋಟದ ಹುಸಿ ಬೆದರಿಕೆ ಕರೆಯೂ ಭೀತಿಯನ್ನು ಮತ್ತಷ್ಟು ಹೆಚ್ಚಿಸಿತು.

ಮಂಗಳೂರು ನಗರ ಪೊಲೀಸರು, ಕೇಂದ್ರೀಯ ಕೈಗಾರಿಕಾ ಭದ್ರತಾ ಪಡೆ (ಸಿಐಎಸ್‌ಎಫ್) ಮತ್ತು ಬಾಂಬ್ ಪತ್ತೆ ಹಾಗೂ ನಿಷ್ಕ್ರಿಯ ದಳದ (ಬಿಡಿಡಿಎಸ್) ಸಿಬ್ಬಂದಿ ಸಂಜೆಯವರೆಗೂ ಕಾರ್ಯಾಚರಣೆ ನಡೆಸಿ ಬಾಂಬ್ ಅನ್ನು ಹೊರಕ್ಕೆ ಸಾಗಿಸಿ ನಾಶಪಡಿಸಿದರು. ಬಳಿಕ ವಿಮಾನ ನಿಲ್ದಾಣ ಸಹಜ ಸ್ಥಿತಿಗೆ ಮರಳಿತು.

**ಬ್ಯಾಗ್ ಒಳಗಿತ್ತು ಬಾಂಬ್:** 'ಬ್ಯಾಕ್ ಪ್ಯಾಕ್' ಮಾದರಿಯ ಬ್ಯಾಗ್‌ವೊಂದು ವಿಮಾನ ನಿಲ್ದಾಣದ ಪ್ರವೇಶದ್ವಾರದ ಬಳಿ ಕುರ್ಚಿಯ ಮೇಲೆ ಶಂಕಾಸ್ಪದ ರೀತಿಯಲ್ಲಿ ಇರುವುದನ್ನು ಅಲ್ಲಿನ ಭದ್ರತಾ ಉಸ್ತುವಾರಿ ಹೊತ್ತಿರುವ ಸಿಐಎಸ್‌ಎಫ್ ಸಿಬ್ಬಂದಿ ಗುರುತಿಸಿದ್ದರು. ತಕ್ಷಣವೇ ಬ್ಯಾಗ್ ಅನ್ನು ಹೊರಕ್ಕೆ ಸಾಗಿಸಿ ಪೊಲೀಸರು ಮತ್ತು ಬಿಡಿಡಿಎಸ್ ತಂಡಕ್ಕೆ ಮಾಹಿತಿ ನೀಡಿದರು.

ಸ್ಥಳಕ್ಕೆ ಬಂದ ಬಾಂಬ್ ನಿಷ್ಕ್ರಿಯ ದಳದ 'ಸೂರ್ಯ' ಹೆಸರಿನ ಶ್ವಾನ, ಬ್ಯಾಗ್‌ನಲ್ಲಿ ಸ್ಫೋಟಕ ಇರುವುದನ್ನು ಖಚಿತಪಡಿಸಿತು. ನಂತರ ಶೋಧಕದ ನೆರವಿನಿಂದ ಬ್ಯಾಗ್ ಅನ್ನು ತಪಾಸಣೆ ನಡೆಸಿದ ಬಿಡಿಡಿಎಸ್ ತಂಡ, ಬಾಂಬ್ ಇರುವುದನ್ನು ದೃಢಪಡಿಸಿತು. 10 ಗಂಟೆಯ ವೇಳೆಗೆ ಬಾಂಬ್ ಇದ್ದ ಬ್ಯಾಗ್ ಅನ್ನು 'ಥ್ರೆಟ್ ಕಂಟೇನ್ಮೆಂಟ್' ವಾಹನದೊಳಕ್ಕೆ ಇರಿಸಲಾಯಿತು.

ಮಧ್ಯಾಹ್ನ 2 ಗಂಟೆಗೆ ಆ ವಾಹನ ವಿಮಾನ ನಿಲ್ದಾಣದಿಂದ ಹೊರಟು ಕೆಂಜಾರು ಮೈದಾನ ತಲುಪಿತು.





ಬಾಂಬ್ ಇದ್ದ ಬ್ಯಾಗ್ ಅನ್ನು ಕೆಂಜಾರು ಮೈದಾನದಲ್ಲಿ ನಾಶಪಡಿಸಲು ಕೊಂಡೊಯ್ಯುತ್ತಿರುವ ಬಾಂಬ್ ಪತ್ತೆ ಮತ್ತು ನಿಷ್ಕ್ರಿಯ ದಳದ ಸಿಬ್ಬಂದಿ (ಎಡಚಿತ್ರ) ಸ್ಫೋಟದ ಬಳಿಕದ ದೃಶ್ಯ

## ಎಲ್ಲೆಡೆ ಕಟ್ಟೆಚ್ಚರ: ಗೃಹ ಸಚಿವ



ಹಾವೇರಿ: 'ಗಣರಾಜ್ಯೋತ್ಸವದ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಉಗ್ರರು ವಿಧ್ವಂಸಕ ಕೃತ್ಯಕ್ಕೆ ಸಂಚು ರೂಪಿಸಿರುವುದಾಗಿ ಗುಪ್ತಚರ ಮಾಹಿತಿ ಇರುವುದರಿಂದ ವಿಮಾನ ನಿಲ್ದಾಣ ಸೇರಿದಂತೆ ಎಲ್ಲೆಡೆ ಕಟ್ಟೆಚ್ಚರ ವಹಿಸಲಾಗಿದೆ' ಎಂದು ಗೃಹ ಸಚಿವ ಬಸವರಾಜ ಬೊಮ್ಮಾಯಿ ತಿಳಿಸಿದರು.

ಶಿಗ್ಗಾವಿಯಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿ, 'ಮಂಗಳೂರು, ಬೆಂಗಳೂರು, ಹುಬ್ಬಳ್ಳಿ, ಬೆಳಗಾವಿ, ಮೈಸೂರು ವಿಮಾನ ನಿಲ್ದಾಣ, ಬಸ್ ನಿಲ್ದಾಣ ಹಾಗೂ ರೈಲು ನಿಲ್ದಾಣಗಳಲ್ಲಿ ಕಟ್ಟೆಚ್ಚರ ವಹಿಸುವಂತೆ ಸೂಚಿಸಲಾಗಿದೆ. ಮಂಗಳೂರು ವಿಮಾನ ನಿಲ್ದಾಣದಲ್ಲಿ ಬಾಂಬ್ ಪತ್ತೆಯಾಗಿದ್ದು, ಅದನ್ನು ತಂದಿಟ್ಟಿರುವ ವ್ಯಕ್ತಿಯನ್ನು ಸಿಸಿಟಿವಿಯಲ್ಲಿ ಗುರುತಿಸಲಾಗಿದೆ. ಶೀಘ್ರ ಪತ್ತೆ ಮಾಡಿ, ಗಂಭೀರ ಕ್ರಮಕೈಗೊಳ್ಳಲಾಗುವುದು' ಎಂದರು.

## 'ಇಂಡಿಗೊ ಸ್ಫೋಟದ ಬೆದರಿಕೆ

ಬಾಂಬ್ ಪತ್ತೆಯಾದ ಬೆನ್ನಲ್ಲೇ ಮಂಗಳೂರಿನಿಂದ ಬೆಂಗಳೂರಿಗೆ ತೆರಳುತ್ತಿದ್ದ ಇಂಡಿಗೊ ಏರ್‌ಲೈನ್ಸ್ ವಿಮಾನದಲ್ಲಿ ಬಾಂಬ್ ಸ್ಫೋಟಿಸುವುದಾಗಿ ವಿಮಾನಯಾನ ನಿಯಂತ್ರಣ ಕೊಠಡಿಗೆ (ಎಟಿಸಿ) ಹುಸಿ ಕರೆ ಬಂದಿತು. ಹಾಗಾಗಿ ವಿಮಾನ ನಿಲ್ದಾಣದಲ್ಲಿ ಭೀತಿಯ ವಾತಾವರಣ ಸೃಷ್ಟಿಯಾಗಿತ್ತು.

'ಮಧ್ಯಾಹ್ನ 3.15ಕ್ಕೆ ಬೆಂಗಳೂರಿಗೆ ಹೊರಡುವ ವಿಮಾನದಲ್ಲಿ ಬಾಂಬ್ ಇರಿಸಿರುವುದಾಗಿ ಅನಾಮಿಕನೊಬ್ಬ ಎಟಿಸಿಗೆ ಕರೆ ಮಾಡಿ ಮಾಹಿತಿ ನೀಡಿದ್ದ. ತಕ್ಷಣವೇ ಬಾಂಬ್ ನಿಷ್ಕ್ರಿಯ ದಳದ ಸಿಬ್ಬಂದಿ ಶೋಧ ನಡೆಸಿದರು. ಯಾವುದೇ ಸ್ಫೋಟಕ ಪತ್ತೆಯಾಗಿಲ್ಲ' ಎಂದು ಮಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ನಿರ್ದೇಶಕ ವಿ.ವಿ. ರಾವ್ ತಿಳಿಸಿದರು.

ತಪಾಸಣೆ ಪೂರ್ಣಗೊಂಡ ಬಳಿಕ ರಾತ್ರಿ ಬೆಂಗಳೂರಿಗೆ ತೆರಳಿತು.

ದಿನಾಂಕ 21/01/2020

# ವಿಮಾನ ನಿಲ್ದಾಣದಲ್ಲಿ ಬಾಂಬ್

ಒಂದನೇ ಪುಟದಿಂದ...

ಬಾಂಬ್‌ನಲ್ಲಿದ್ದ ಟೈಮರ್ ಸ್ಥಗಿತವಾಗಿದ್ದ ಕಾರಣದಿಂದ ನಿಷ್ಕ್ರಿಯಗೊಳಿಸಲು ಸಾಧ್ಯವಾಗಲಿಲ್ಲ. ಬಾಂಬ್ ನಿಷ್ಕ್ರಿಯ ದಳದ ತಂಡವು ಬಾಂಬ್ ಇದ್ದ ಬ್ಯಾಗ್ ಅನ್ನೇ ಸಂಜೆ 5.37ಕ್ಕೆ ಸ್ಫೋಟಗೊಳಿಸುವ ಮೂಲಕ ಅದನ್ನು ನಾಶಪಡಿಸಿತು.

**ಆಟೊದಲ್ಲಿ ಬಂದಿದ್ದ ಶಂಕಿತ:** ಸೋಮವಾರ ಬೆಳಿಗ್ಗೆ 9 ಗಂಟೆಗೂ ಮೊದಲು ಶಂಕಿತ ವ್ಯಕ್ತಿಯೊಬ್ಬ ಆಟೊ ರಿಕ್ಷಾದಲ್ಲಿ ವಿಮಾನ ನಿಲ್ದಾಣದ ಪ್ರವೇಶ ದ್ವಾರಕ್ಕೆ ಬಂದು ಹೋಗಿರುವುದು ಸಿಸಿಟಿವಿ ಕ್ಯಾಮೆರಾಗಳಲ್ಲಿ ಸೆರೆಯಾಗಿದೆ. ಪ್ಯಾಂಟ್, ಶರ್ಟ್ ಧರಿಸಿದ್ದ ಶಂಕಿತ ತಲೆಗೆ ಟೋಪಿ ಹಾಕಿದ್ದ. ಈತನೇ ಬಾಂಬ್ ಇರಿಸಿರುವ ಸಾಧ್ಯತೆ ಇದೆ ಎಂದು ಪೊಲೀಸರು ಶಂಕಿಸಿದ್ದಾರೆ.

ಶಂಕಿತ ವ್ಯಕ್ತಿ ಮತ್ತು ಆತ ಬಂದಿದ್ದ ಆಟೊ ರಿಕ್ಷಾದ ಚಿತ್ರಗಳನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಂಡಿರುವ ಪೊಲೀಸ್ ಕಮಿಷನರ್ ಡಾ.ಪಿ.ಎಸ್. ಹರ್ಷ, ಆರೋಪಿ ಪತ್ತೆಗೆ ನೆರವಾಗಲು ಸಾರ್ವಜನಿಕರಲ್ಲಿ ಮನವಿ ಮಾಡಿದ್ದಾರೆ.

**ತಪ್ಪಿದ ಅಪಾಯ:** ಮಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಪ್ರಯಾಣಿಕರು ಒಳಕ್ಕೆ ಹೋಗಲು ಮತ್ತು ಹೊರಕ್ಕೆ ಬರಲು ಒಂದೇ ದ್ವಾರವಿದೆ. ಅಲ್ಲಿಂದಲೇ ಎಲ್ಲರೂ ಸಂಚರಿಸಬೇಕಿದೆ. ಬಾಂಬ್ ಪತ್ತೆಯಾದ ಸ್ಥಳ ಪ್ರವೇಶ ದ್ವಾರದ ಕೆಲವೇ ಮೀಟರ್ ದೂರದಲ್ಲಿ ಇದೆ.

ಅಂತರರಾಷ್ಟ್ರೀಯ ವಿಮಾನಗಳು ಬಂದಿಳಿದಾಗ ನೂರಾರು ಜನರು ಪ್ರವೇಶದ್ವಾರದ ಎದುರು ಜಮಾಯಿಸುತ್ತಾರೆ. ಅಂತಹ ಸಮಯದಲ್ಲಿ ಸ್ಫೋಟ ಸಂಭವಿಸಿದ್ದರೆ ಭಾರಿ ಪ್ರಮಾಣದ ಪ್ರಾಣಹಾನಿ ಆಗುವ ಅಪಾಯವಿತ್ತು.

**ಮೂರು ತಂಡ:** ಪತ್ರಕರ್ತರ ಜೊತೆ ಮಾತನಾಡಿದ ಕಮಿಷನರ್, 'ತನಿಖೆಗೆ ಮೂರು ತಂಡಗಳನ್ನು ರಚಿಸಲಾಗಿದೆ. ಬ್ಯಾಗ್ ಇರಿಸಿದ್ದ ಆರೋಪಿ, ಆತನ ಹಿಂದಿರುವವರನ್ನು ಶೀಘ್ರ ಬಂಧಿಸುವ ವಿಶ್ವಾಸವಿದೆ. ಸ್ಫೋಟ ಯತ್ನದ ಹಿಂದಿನ ಕಾರ್ಯಯೋಜನೆಯನ್ನೂ ಬಯಲಿಗೆ ಎಳೆಯಲಾಗುವುದು' ಎಂದರು.

ಸಿಐಎಸ್ಎಫ್ ಸಿಬ್ಬಂದಿ ತಕ್ಷಣವೇ ಅನುಮಾನಾಸ್ಪದ ಬ್ಯಾಗ್ ಪತ್ತೆ ಮಾಡಿರುವುದರಿಂದ ಪ್ರಾಣಹಾನಿ ತಪ್ಪಿದೆ ಎಂದು ಹೇಳಿದರು.

## 'ಬಾಕ್ಸ್ ಬಾಂಬ್'ನಲ್ಲಿ ಏನಿತ್ತು?

'ಟಿಫಿನ್ ಬಾಕ್ಸ್ ಮಾದರಿಯ ಸಾಣ್ಣದ ಹುಂಡಿಯನ್ನು ಬಾಂಬ್ ತಯಾರಿಕೆಗೆ ಬಳಸಲಾಗಿತ್ತು. ಅದರಲ್ಲಿ ಸ್ಫೋಟಕದ ಪುಡಿ, ತಂತಿ ಮತ್ತು ಟೈಮರ್ ಒಳಗೊಂಡ ಸುಧಾರಿತ ಸ್ಫೋಟಕ ಸಾಧನ ಹಾಗೂ ಲೋಹದ ಚೂರುಗಳಿದ್ದವು' ಎಂದು ಬಾಂಬ್ ನಿಷ್ಕ್ರಿಯ ದಳದ ಸಿಬ್ಬಂದಿ ಮಾಹಿತಿ ನೀಡಿದರು.

ಬ್ಯಾಕ್ ಪ್ಯಾಕ್ ಬ್ಯಾಗ್‌ನ ಒಳಗೆ ಬಾಕ್ಸ್ ಬಾಂಬ್ ಇರಿಸಲಾಗಿತ್ತು. ಬ್ಯಾಗ್‌ನ ತೂಕ 8 ಕೆ.ಜಿ.ಗೂ ಹೆಚ್ಚಿತ್ತು ಎಂದು ತಿಳಿಸಿದರು..